

بسم اللهِ الرّحمٰن الرّحيم

# ಜಲ್ಸಾ ಸಾಲಾನ ಯು.ಕೆ. 2023: ಅವಲೋಕನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **04–08–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಅನುಗ್ರಹದಿಂದ ಕಳೆದ ಜುಮಾದಿಂದ ರವಿವಾರ ತನಕ ಅಹ್ಮದಿಯಾ ಜಮಾಅತ್ ಯು.ಕೆ.ಯ ಜಲ್ಸ ಸಾಲಾನ ವಿಜಯಕರವಾಗಿ ಜರುಗಿತು – ಅಲ್‌ಹಮ್ದುಲಿಲ್ಲಾಹ್. ಈ ವರ್ಷದ ಹಾಜರಿಯೂ ಕಳೆದ ವರ್ಷಕ್ಕೆ ಹೋಲಿಸಿ ಬಹಳ ಅಧಿಕವಿತ್ತು. ಇದಕ್ಕಾಗಿ ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೆ. ನಮ್ಮ ಜಲ್ಸವನ್ನು ಅಲ್ಲಾಹನು ಅಪರಿಮಿತವಾದ ಅನುಗ್ರಹಗಳಿಂದ ತುಂಬಿಸಿದನು ಎಂಬುದು ಅವನ ಔದಾರ್ಯವಾಗಿದೆ.

ನಾವಂತು ಬಲಹೀನರು. ನಮ್ಮ ಎಲ್ಲ ಕೆಲಸಗಳು ಅಲ್ಲಾಹನ ಕೃಪೆಯಿಂದ ನಡೆಯುತ್ತವೆ. ನೀವು ಅಲ್ಲಾಹನ ಅನುಗ್ರಹಗಳನ್ನು ಎಣಿಸಲು ಬಯಸುವುದಾದರೆ, ಅದು ನಿಮ್ಮಿಂದ ಸಾಧ್ಯವಲ್ಲ ಎಂಬ ಅಲ್ಲಾಹನ ವಚನದ ಈಡೇರುವಿಕೆಯನ್ನು ಅಹ್ಮದಿಯಾ ಜಮಾಅತ್ ದಿನನಿತ್ಯ ಕಾಣುತ್ತಿದೆ.

ಆದ್ದರಿಂದ ಕೃತಜ್ಞತೆ ಅರ್ಪಿಸುವುದು ನಮ್ಮ ಕೆಲಸವಾಗಿದೆ. ಅಲ್ಲಾಹನ ಅನುಗ್ರಹಗಳು ವರ್ಷಿಸುವಾಗ ಅವನ ಮುಂದೆ ಬಾಗುತ್ತಾ ಇರಬೇಕಾದದ್ದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಾವು ಈ ಕರ್ತವ್ಯವನ್ನು ನಿರ್ವಹಿಸುವ ವರೆಗೂ ನಮ್ಮ ಹೆಜ್ಜೆ ಮುಂದಕ್ಕೆ ಹೋಗುತ್ತಾ ಇರುವುದು – ಇನ್‌ಶಾ ಅಲ್ಲಾಹ್. ಒಟ್ಟಿನಲ್ಲಿ ವ್ಯವಸ್ಥಾಪಕರು ಮತ್ತು ಜಲ್ಸದಲ್ಲಿ ಭಾಗವಹಿಸಿದ ಎಲ್ಲರೂ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು.

ಈಗ ನಾನು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಎಲ್ಲ ಕಾರ್ಯಕರ್ತರು ಬಹಳ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು. ಮುಗುಳ್ನಗುತ್ತಾ ಅಸಾಮಾನ್ಯವಾದ ರೀತಿಯಲ್ಲಿ ತಮ್ಮ ಡ್ಯೂಟಿಗಳನ್ನು ನಿರ್ವಹಿಸಿದರು. ಊಟದ ವ್ಯವಸ್ಥೆಯಲ್ಲಿ ಲಜ್ನದ ಕಡೆಯಿಂದ ಸಾಮಾನ್ಯವಾಗಿ ಉಂಟಾಗುವ ದೂರುಗಳು ಸಹ ಈ ಬಾರಿ ಇರಲಿಲ್ಲವೆಂದೇ ಹೇಳಬಹುದು. ಅದೇ ರೀತಿಯಲ್ಲಿ ಟ್ರಾಫಿಕ್, ಆಹಾರ ತಯಾರಿ, ರೊಟ್ಟಿ ಪ್ಲಾಂಟ್, ಸೆಕ್ಯೂರಿಟಿ, ಶುಚಿತ್ವ ಮುಂತಾದ ವಿಭಾಗಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದುವು. ಎಲ್ಲಕ್ಕಿಂತ ಹೆಚ್ಚಾಗಿ ಎಂ.ಟಿ.ಎ. ವಿಭಾಗ ಈ ಬಾರಿ ಹೊಸ ಶೈಲಿಯಲ್ಲಿ ಪೂರ್ತಿ ಲೋಕವನ್ನು ಜಲ್ಸದೊಂದಿಗೆ ಜೋಡಿಸಿತು. ಒಟ್ಟಿನಲ್ಲಿ ನಾನು ಹೆಸರು ಎತ್ತಿ ಉಲ್ಲೇಖಿಸಿದ ಮತ್ತು ಹೆಸರೆತ್ತಿ ಉಲ್ಲೇಖಿಸದ ಎಲ್ಲ ವಿಭಾಗಗಳಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಹೊರಗಿನಿಂದ ಬಂದ ಅನ್ಯರು ಜಲ್ಸದ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಕೆಲವನ್ನು ನಾನು ಮುಂದಿರಿಸುತ್ತೇನೆ. ಬುರ್ಕಿನಾಫಾಸೋದ ಓರ್ವ ಪ್ರಸಿದ್ಧ ನೇತ್ರರೋಗ ಡಾಕ್ಟರ್ ಹೇಳಿದರು: ಸಾವಿರಾರು ಜನರು ಒಂದೇ ಉದ್ದೇಶಕ್ಕಾಗಿ ಒಂದು ಸ್ಥಳದಲ್ಲಿ ಒಬ್ಬ ಧಾರ್ಮಿಕ ನಾಯಕನ ಸುತ್ತ ಒಟ್ಟಾಗಿರುವರು. ಇಷ್ಟು ವ್ಯವಸ್ಥಾಪಿತ ಮತ್ತು ವಿಸ್ತಾರವಾದ ಏರ್ಪಾಡು ನನಗೆ ಆಶ್ಚರ್ಯಕರವಾಗಿದೆ.

ಅಮೇರಿಕದ ಓರ್ವ ಪ್ರಸಿದ್ಧ ಕಾನೂನು ತಜ್ಞ ಪ್ರೊಫೆಸರ್ ಹೇಳಿದರು: ನಾನು ಲೋಕದ ಎಲ್ಲೆಡೆ ಇಂತಹ ಕಾರ್ಯಕ್ರಮಗಳನ್ನು ಸ್ವತಃ ನಡೆಸಿದ್ದೇನೆ. ಅಲ್ಲಿ ರಿಜಿಸ್ಟ್ರೇಶನ್ ಕೂಡ ನಡೆಯುತ್ತದೆ. ಆದರೆ ಜಲ್ಸ ಸಾಲಾನದಲ್ಲಿ ಎಷ್ಟು ವ್ಯವಸ್ಥಾಪಿತವಾಗಿ ರಿಜಿಸ್ಟ್ರೇಶನಿನ ಹಂತಗಳನ್ನು ಈಡೇರಿಸಲಾಗುತ್ತಿತ್ತೋ ಅದು ಆಶ್ಚರ್ಯಕರವಾದ ದೃಶ್ಯವಾಗಿತ್ತು.

ಬೇಲೀಸಿನ ಒಂದು ಪಟ್ಟಣದ ಮೇಯರ್ ಬಂದಿದ್ದರು. ಅವರು ಹೇಳುತ್ತಾರೆ: ನಾನು ನನ್ನ ಜೀವಿತದಲ್ಲಿ ಇಷ್ಟು ಶಾಂತಿಯುತ ಜನರನ್ನು ಕಂಡಿಲ್ಲ. ಇಲ್ಲಿ ನಾನು ನೋಡಿದ ಆಧ್ಯಾತ್ಮಿಕ ಮತ್ತು ಸಹೋದರತೆಯ ವಾತಾವರಣ ನನಗೆ ಆಶ್ಚರ್ಯಕರವಾಗಿದೆ.

ಇಂಡೋನೇಶಿಯದ ಧಾರ್ಮಿಕ ಕಾರ್ಯಗಳ ಮಾಜಿ ಮಂತ್ರಿ ಹೇಳುತ್ತಾರೆ: "ಪ್ರೀತಿ ಎಲ್ಲರೊಡನೆ, ಹಗೆಯಿಲ್ಲ ಯಾರೊಡನೆ" ಎಂಬ ನಿಮ್ಮ ಆದರ್ಶ ಸೂತ್ರವನ್ನು ನಾನು ಏರ್‌ಪೋರ್ಟ್‌ನಿಂದ ಜಲ್ಸದ ವರೆಗೂ ಕಾಣುತ್ತಾ ಇದ್ದೆ.

ಗೇಂಬಿಯದ ಮಾಹಿತಿ ಮಂತ್ರಿ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ಜಲ್ಸ ಸಾಲಾನದ ಎಲ್ಲ ಏರ್ಪಾಡುಗಳಿಂದ ನಾನು ಬಹಳ ಪ್ರಭಾವಿತಗೊಂಡಿದ್ದೇನೆ. ಇಷ್ಟು ದೊಡ್ಡ ಜನಕೂಟದಲ್ಲಿ ಜಗಳದ ಒಂದು ಘಟನೆಯೂ ಕಂಡಿಲ್ಲ. ನನ್ನ ಅನುಭವಕ್ಕೆ ಬಂದ ಮತ್ತೊಂದು ಸಂಗತಿ, ತಮ್ಮ ಇಮಾಮಿನೊಂದಿಗೆ ಜಮಾಅತಿನ ಸಹೋದರರ ಪ್ರೀತಿಯ ಸಂಬಂಧವಾಗಿದೆ. ಪೂರ್ತಿ ಲೋಕದಲ್ಲಿ ಇದಕ್ಕೆ ಬೇರೆ ಉದಾಹರಣೆ ಸಿಗುವುದಿಲ್ಲ.

ಬ್ರೆಝಿಲಿನಿಂದ ಬಂದ ಪ್ರತಿನಿಧಿ ಹೇಳಿದರು: 118 ದೇಶಗಳಿಂದ ಬಂದ ಜನರು ಸಾಹೋದರ್ಯದಿಂದ ಒಟ್ಟಾಗಿ ಇರುವುದು ಬೇರೆಯವರಿಗೆ ಸಾಧ್ಯವಾಗುವ ಸಂಗತಿಯಲ್ಲ. ಎಲ್ಲ ಜನರು ಈ ರೀತಿಯಾಗಿ ಪರಸ್ಪರ ಉತ್ತಮ ಸ್ವಭಾವ, ಸಹಾನುಭೂತಿ, ಸಂತೋಷ ಮತ್ತು ಗೌರವದಿಂದ ಭೇಟಿಯಾಗುವುದು ನನಗೆ

ಚೆನ್ನಾಗಿ ತೋರುತ್ತಿತ್ತು. ಅತಿಥಿಗಳಿಗಾಗಿ ಟ್ರಾನ್ಸ್‌ಪೋರ್ಟಿನ ಉತ್ತಮ ವ್ಯವಸ್ಥೆ ಇತ್ತು.

ಸ್ಪೈನ್‌ನಿಂದ ಬಂದ ಸಂಘದಲ್ಲಿ ಇದ್ದ ಇತಿಹಾಸಗಾರನಾದ ಒಬ್ಬ ವ್ಯಕ್ತಿ ಹೇಳಿದರು: ಇಂದಿನ ಕಾಲದಲ್ಲಿ ಆತ್ಮವಿಶ್ವಾಸ, ಧೈರ್ಯ ಮತ್ತು ಪರಿಶ್ರಮದ ಮಾದರಿಯನ್ನು ಅಹ್ಮದಿಯಾ ಜಮಾಅತ್ ಸ್ಥಾಪಿಸಿದೆ.

ಇಟಲಿಯ ಒಬ್ಬ ಅಂಕಣಗಾರ ಹೇಳಿದರು: ನಾನು ಜಲ್ಸದ ಬಗ್ಗೆ ಹಿಂದೆಯೂ ಓದಿದ್ದೇನೆ. ಆದರೆ ಜಲ್ಸದಲ್ಲಿ ಭಾಗವಹಿಸುವುದು ಬೇರೆಯೇ ಒಂದು ಅನುಭವವಾಗಿದೆ. ಜಲ್ಸದಲ್ಲಿ ನಾನು ನೋಡಿದ ಅತ್ಯಂತ ಪ್ರಧಾನ ಸಂಗತಿ ನಮಾಝ್ ಆಗಿದೆ.

ಸೆನಿಗಾಲಿನ ಒಂದು ರೀಜನಿನ ಗವರ್ನರ್ ಬಂದಿದ್ದರು. ಅವರು ಹೇಳುತ್ತಾರೆ: ಪರಸ್ಪರ ಸ್ನೇಹದ ಇಂತಹ ಉದಾಹರಣೆ ನಾನು ಬೇರೆ ಎಲ್ಲೂ ನೋಡಿಲ್ಲ. ಹಝ್ರತ್ ಮಸೀಹ್ ಮೌಊದ್[ಅ]ರ ಲಿಖಿತಗಳು ನನ್ನ ಮೇಲೆ ಬಹಳ ಪ್ರಭಾವವನ್ನು ಬೀರಿದುವು. ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬರು ತನಗಿಂತ ಇತರರಿಗೆ ಆದ್ಯತೆ ನೀಡುತ್ತಾರೆ.

ಕೊಲಂಬಿಯಾದ ಒಬ್ಬ ಅತಿಥಿ ಹೇಳುತ್ತಾರೆ: ನಾನು ಇಲ್ಲಿಯ ಶಾಂತಿಪೂರ್ಣ ವಾತಾವರಣ, ಸಾಹೋದರ್ಯ, ಪ್ರೀತಿ, ಖಲೀಫತುಲ್ ಮಸೀಹ್‌ರ ಭಾಷಣಗಳು ಮತ್ತು ಜಮಾಅತಿನ ಸದಸ್ಯರನ್ನು ನೋಡಿ ಬಹಳ ಪ್ರಭಾವಿತಗೊಂಡೆನು.

ಚಿಲಿಯಿಂದ ಮೂರು ವ್ಯಕ್ತಿಗಳು ಬಂದಿದ್ದರು. ಅವರು ಒಂದು ಕ್ರೈಸ್ತ ಸಂಸ್ಥೆಯ ಪ್ರತಿನಿಧಿಗಳಾಗಿದ್ದರು. ಅವರಲ್ಲಿ ಒಬ್ಬರು ಹೇಳಿದರು: ನಿಮ್ಮ ಜಮಾಅತ್ ಒಂದು ಶರೀರದ ಹಾಗೆ ಇದೆ. ಖಲೀಫತುಲ್ ಮಸೀಹ್ ಆ ದೇಹದ ಶಿರ ಮತ್ತು ಮೆದುಳು ಆಗಿದ್ದಾರೆ. ಜಮಾಅತಿನವರು ದೇಹದ ಅಂಗಾಂಗಗಳ ಹಾಗೆ ಆಗಿವೆ. ಅವುಗಳು ಮೆದುಳಿನ ಸಿಗ್ನಲ್ ಮತ್ತು ಸೂಚನೆ ಪ್ರಕಾರ ಚಲಿಸುತ್ತವೆ.

ಸ್ಪೈನ್‌ನಿಂದ ಬಂದ ಜಮಾಅತಿನ ಬಗ್ಗೆ ಅನ್ವೇಷಣೆ ನಡೆಸುತ್ತಿರುವ ಒಬ್ಬ ವ್ಯಕ್ತಿ ಹೇಳುತ್ತಾರೆ: ಈ ಜಲ್ಸದಲ್ಲಿ ನನ್ನೊಂದಿಗೆ ಅರಸನಿಗಿಂತ ಉತ್ತಮವಾಗಿ ವರ್ತಿಸಲಾಯಿತು. ಅಹ್ಮದೀ ಸ್ವಯಂ ಸೇವಕರು ನಲ್ವತ್ತು ಸಾವಿರಕ್ಕೂ ಮೇಲ್ಪಟ್ಟು ಇರುವ ಈ ಅತಿಥಿಗಳ ಸೇವೆಯನ್ನು ಆಯಾಸಗೊಳ್ಳದೇ ಮಾಡುವುದು ಒಂದು ಪವಾಡವೇ ಆಗಿದೆ. ಖಂಡಿತವಾಗಿಯೂ ಈ ಜಲ್ಸದ ಮೂಲಕ ನಾನು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಿರುವೆನು.

ಕೆನಡದಿಂದ ಬಂದ ಒಬ್ಬ ಪಾರ್ಲಿಮೆಂಟ್ ಸದಸ್ಯ ಹೇಳುತ್ತಾರೆ: ಜಲ್ಸದಲ್ಲಿ ನನಗೆ ಬರಲು ಸಾಧ್ಯವಾದದ್ದು ಒಂದು ಮಹತ್ತಾದ ಸಂಗತಿಯಾಗಿದೆ. ಸ್ವಂತ ಧರ್ಮದೊಂದಿಗೆ ನಿಷ್ಠೆ ತೋರಿಸುವ ಮತ್ತು ಸ್ವಂತ ಇಷ್ಟದಿಂದ ಕೆಲಸ ಮಾಡುವ ಪಾಠ ಈ ಜಲ್ಸದಿಂದ ಲಭಿಸುತ್ತದೆ.

ತುರ್ಕಿಯಿಂದ ಪ್ರಿಂಟಿಂಗ್ ಪ್ರೆಸ್ಸಿನ ಕೆಲವು ಮಾಲಿಕರು ಬಂದಿದ್ದರು. ಅವರಲ್ಲಿ ಇರುವ ಒಬ್ಬ ಡೈರೆಕ್ಟರ್ ಹೇಳುತ್ತಾರೆ: ಇಷ್ಟು ದೊಡ್ಡ ಸಭೆಯನ್ನು ಇಷ್ಟು ಪ್ರಾವೀಣ್ಯದಿಂದ ಜರುಗಿಸಿದ್ದು ನನಗೆ ಅಚ್ಚರಿಯನ್ನು ಉಂಟುಮಾಡಿದೆ. ನನ್ನನ್ನು ಆಶ್ಚರ್ಯಗೊಳಿಸಿದ ಮತ್ತೊಂದು ಸಂಗತಿಯೇನೆಂದರೆ, ಯಾರು ಕೂಡ ಸಿಗ್ರೇಟ್ ಸೇದುವುದನ್ನು ನಾನು ಕಂಡಿಲ್ಲ.

ಲಟ್‌ವಿಯಾದಿಂದ ಬಂದಿದ್ದ ಸಮಾಜ ಸೇವಕಿಯೊಬ್ಬಳು ಹೇಳುತ್ತಾರೆ: ಈ ಜಲ್ಸದಿಂದ ನನಗೆ ಇಸ್ಲಾಮಿನ ಬಗ್ಗೆ ಅರಿಯಲು ಸಂದರ್ಭ ಸಿಕ್ಕಿತು. ನಾನು ಮರಳಿ ಹೋಗಿ ಪವಿತ್ರ ಖುರ್‌ಆನನ್ನು ಪಠಿಸುವೆ ಮತ್ತು ನನ್ನ ಅರಿವನ್ನು ವರ್ಧಿಸಲು ಪ್ರಯತ್ನಿಸುವೆ.

ಟಿ.ವಿ.ಯಲ್ಲಿ ಜಲ್ಸ ನೋಡಿದವರ ಕೆಲವು ಅನಿಸಿಕೆಗಳು ಸಹ ಇವೆ:

ಕಾಂಗೋಬರಾಜಫವೇಲ್‌ನಿಂದ ನಮ್ಮ ಮುಬಲ್ಲಿಗ್ ಬರೆಯುತ್ತಾರೆ: ಒಬ್ಬ ಕ್ರೈಸ್ತ ಸ್ನೇಹಿತನನ್ನು ಜಲ್ಸಕ್ಕೆ ಆಮಂತ್ರಿಸಲಾಗಿತ್ತು. ಸಮಾರೋಪ ಭಾಷಣವನ್ನು ಆಲಿಸಿದ ನಂತರ ಅವರು ಹೇಳಿದರು: ಲೋಕದ ಪ್ರತಿಯೊಂದು ಆಡಳಿತ ಈ ಅಧ್ಯಾಪನೆಗಳನ್ನು ಪಾಲಿಸಿದರೆ ಲೋಕದಿಂದ ಬಡತನ ಪೂರ್ಣವಾಗಿ ಕೊನೆಗೊಳ್ಳದಿದ್ದರೂ ಕನಿಷ್ಠ ಪಕ್ಷ ಲೋಕದಲ್ಲಿ ಯಾವನೇ ವ್ಯಕ್ತಿಯೂ ರಾತ್ರಿ ಹಸಿವಿನಿಂದ ಮಲಗುವ ಸ್ಥಿತಿ ಬರದು. ಇಸ್ಲಾಮಿನ ಖಲೀಫರಿಗೆ ತನ್ನ ಪ್ರಜೆಗಳ ಬಗ್ಗೆ ಕಾಳಜಿ ಇದ್ದ ಹಾಗೆ ನಮ್ಮ ನಾಯಕರು ಸಹ ಹೀಗೆಯೇ ಕಾಳಜಿ ವಹಿಸಿದರೆ ನಮ್ಮ ಲೋಕ ಸ್ವರ್ಗವಾಗುವುದು.

ಐಸ್‌ಲೇಂಡಿನ ಜಾಗತಿಕ ಶಾಂತಿಯ ಮಿಶನರಿ ಆದ ಒಬ್ಬ ವ್ಯಕ್ತಿ ಹೇಳುತ್ತಾರೆ: ನಾನು ಭೇಟಿಯಾದ ಜಮಾಅತಿನ ಎಲ್ಲ ವ್ಯಕ್ತಿಗಳು ಸೌಮ್ಯ ಹೃದಯಿ, ಮೃದುಳ, ಸೇವೆಗಾಗಿ ಸದಾ ಸನ್ನದ್ಧ ಮತ್ತು ಅತಿಥಿ ಸತ್ಕಾರಿಯಾಗಿದ್ದರು. ವಸತಿಯ ವ್ಯವಸ್ಥೆ ಬಹಳ ಉತ್ತಮವಾಗಿತ್ತು.

ಹೇಟಿಯ ಜುಡೀಶರಿ ಪೋಲೀಸಿನ ಪ್ರತಿನಿಧಿ ಹೇಳಿದರು: ನಾನೊಬ್ಬ ಕ್ರೈಸ್ತನಾಗಿಯೂ ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಲ್ಸದಲ್ಲಿ ಭಾಗವಹಿಸಿಕೊಂಡು ನನಗೆ ಬಹಳಷ್ಟು ಅರಿಯಲು ಸಂದರ್ಭ ಲಭಿಸಿತು.

(ಹುಝೂರ್ ಹೇಳಿದರು:) ಈ ರೀತಿಯಾಗಿ ಅಲ್ಲಾಹನ ಅನುಗ್ರಹದಿಂದ ಅನೇಕ ಘಟನೆಗಳು, ಅಭಿಪ್ರಾಯಗಳು ಮತ್ತು ಅನಿಸಿಕೆಗಳು ಲಭಿಸಿವೆ. ಅಹ್ಮದಿಯರ ಜೀವಿತಗಳನ್ನು ಸದಾ ಕಾಲಕ್ಕೂ ಅಲ್ಲಾಹನೊಂದಿಗೆ ಜೋಡಿಸುವಂತಹ ಫಲಿತಾಂಶಗಳು ಈ ಜಲ್ಸದಿಂದ ಉಂಟಾಗುವಂತೆ ಅಲ್ಲಾಹನು ಮಾಡಲಿ. ನಂಬಿಕೆ ಮತ್ತು ದೃಢವಿಶ್ವಾಸದಲ್ಲಿ ವರ್ಧನೆ ಉಂಟಾಗಲಿ. ಹಝ್ರತ್ ಮಸೀಹ್ ಮೌಊದ್[ಅ]ರ ಆಗಮನದ ಉದ್ದೇಶವನ್ನು ಈಡೇರಿಸುವಂತಾಗಲಿ.

ಅದೇ ರೀತಿಯಲ್ಲಿ ಅನ್ಯರಲ್ಲೂ ಕೇವಲ ತಾತ್ಕಾಲಿಕವಲ್ಲದ, ಬದಲಾಗಿ ಸ್ಥಾಯಿಯಾಗಿ ಅವರ ಕಣ್ಣುಗಳನ್ನು ತೆರೆಸುವಂತಹ ಪ್ರಭಾವಗಳು ಉಂಟಾಗಲಿ.

ಮಾಧ್ಯಮಗಳ ಮೂಲಕವೂ ಜಲ್ಸದ ಕಾರ್ಯಕ್ರಮಗಳು ನೋಡಲೂ ಆಲಿಸಲೂ ಆಯಿತು. ಆಫ್ರಿಕದಲ್ಲಿ 24 ಟಿ.ವಿ. ಚಾನೆಲ್‌ಗಳು ನನ್ನ ಪೂರ್ತಿ ಭಾಷಣಗಳನ್ನು ಪ್ರಸಾರ

ಮಾಡಿದುವು. ಈ ರೀತಿಯಾಗಿ 40 ಮಿಲಿಯನ್‌ಗಿಂತ ಹೆಚ್ಚಿನ ಜನರು ಈ ಭಾಷಣಗಳನ್ನು ಆಲಿಸಿದರು. ಪತ್ರಿಕೆಗಾರರಿಗಾಗಿ ಮೀಡಿಯಾ ಸೆಂಟರನ್ನು ನಿರ್ಮಿಸಲಾಗಿತ್ತು. ಅಲ್ಲಿ 23 ಮಾಧ್ಯಮ ಪ್ರತಿನಿಧಿಗಳು ಮತ್ತು ಪತ್ರಿಕೆಗಾರರು ಜಲ್ಸ ಆಲಿಸಿದರು. ಈ ರೀತಿಯಾಗಿ ಅವರು ದಿನಾಲೂ ವರದಿಗಳನ್ನು ತಯಾರು ಮಾಡುತ್ತಿದ್ದರು.

ಒಟ್ಟಾಗಿ 72 ಮೀಡಿಯಾ ರಿಪೋರ್ಟ್‌ಗಳನ್ನು ತಯಾರಿ ಮಾಡಲಾಯಿತು. ಅವುಗಳು 50 ಮಿಲಿಯನ್ ಜನರಿಗೆ ತಲುಪಿದುವು. 41 ವೆಬ್‌ಸೈಟ್‌ಗಳಲ್ಲಿ ವಾರ್ತೆಗಳು ಪ್ರಸಾರಗೊಂಡುವು. ಜಲ್ಸದ ಕುರಿತು 15 ಲೇಖನಗಳು ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಂಡುವು. ವಿವಿಧ ಟಿ.ವಿ. ಚ್ಯಾನೆಲ್‌ಗಳಲ್ಲಿ 14 ವಾರ್ತೆಗಳು ಪ್ರಸಾರಗೊಂಡುವು. ರೇಡಿಯೋ ಸ್ಟೇಶನಿನಲ್ಲಿ 37 ವಾರ್ತೆಗಳು ಪ್ರಸಾರಗೊಂಡುವು.

ಒಟ್ಟಿನಲ್ಲಿ ಅಲ್ಲಾಹನು ಎಲ್ಲ ರೀತಿಯಲ್ಲೂ ಈ ಜಲ್ಸವನ್ನು ಅನುಗ್ರಹೀತಗೊಳಿಸಿದನು. ಅಲ್ಲಾಹನು ಸದಾ ನಮ್ಮನ್ನು ವಿನಯವಂತ ಮತ್ತು ಕೃತಜ್ಞತೆಯುಳ್ಳ ದಾಸರನ್ನಾಗಿ ಮಾಡಿಕೊಂಡು ನಮ್ಮ ಸ್ವಂತ ಸುಧಾರಣೆ ಮಾಡುವವರನ್ನಾಗಿ ಮಾಡಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Baithul Futhuh',*** London, U.K, On 04-08-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon